ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು. ಕೊಂಡುಕೊಳ್ಳಲು ಶಕ್ತ ಇದ್ದವರು ಕೊಂಡುಕೊಳ್ಳ ಬಹುದು.

Mr. SPEAKER.—Next question. Sri H. Siddaveerappa. The Hon'ble Member is not present. Question No. 108 will be treated as an unstarred question.

Next question. Sri W. H. Hanumanthappa.

Scheme for increased Supply of drinking water to Bangalore from Chamrajendra Water Works.

Q.*—142. **Sri W. H. HANUMANTHAPPA (Bangalore District—General)—

Will the Government be pleased to state :—

(*a*) whether they are aware that the supply of drinking water in Bangalore is inadequate for the growing City ;

(b) whether they will execute the scheme estimated to cost Rs. 39 lakhs for increasing the supply of water from the Chamarajendra Water Works ?

A.—**The Hon'ble Sri T. MARIAPPA** (Home Minister).—

(*a*) Yes.

(*b*) The scheme is under consideration.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು. – ಇವತ್ತಿನಿಂದ ಬೆಂಗಳೂರಿನಲ್ಲಿ ಬೆಳಿಗ್ಗೆ 10 ಘಂಟೆಯಿಂದ ಸಾಯಂಕಾಲ 4 ಘಂಟೆಯವರೆಗೆ ನೀರು ಸರಬರಾಯಿ ಮಾಡುವುದಿಲ್ಲ ಎಂದು ಹೇಳಿರುವುದಕ್ಕೆ ಕಾರಣವೇನು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೀರಿಗೆ ಅನಾನುಕೂಲವಾಗಿದೆ ಎಂಬುದನ್ನು ಒಪ್ಪಿಕೊಳ್ಳುತ್ತೇವೆ.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು.—ಇಂಟರ್‌ಮಿಟೆಂಟ್ ಆಗಿ ನೀರು ಸರಬರಾಯಿ ಮಾಡುವುದರಿಂದ ಹೊರಗಿನಿಂದ ಬರುವವರಿಗೆ ಅನಾನುಕೂಲ ಎಂಬುದು ಸರ್ಕಾರದವರಿಗೆ ತಿಳಿದಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೆಲವು ವೇಳೆ ಅನೇಕ ಕಾರಣಗಳಿಂದ ಈ ತರಹ ರೇಷ್ಟ್ ಮಾಡಬೇಕಾಗುತ್ತದೆ.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು.—39 ಲಕ್ಷ ರೂಪಾಯಿಗೆ ಅಂದಾಜು ಮಾಡಿದ್ದರೂ ಇದುವರೆಗೆ ಆ ಕಾರ್ಯವನ್ನು ಏಕೆ ಕೈಕೊಳ್ಳಲಿಲ್ಲ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—The scheme is under consideration ಎಂಬುದಾಗಿ ಉತ್ತರ ಕೊಟ್ಟಿದೆ. ಯಾವ ಯಾವ ಹಂತದಲ್ಲಿ ಮಾಡಬೇಕು, ಸಾಮಾನುಗಳನ್ನು ಹೇಗೆ ಒದಗಿಸಿಕೊಳ್ಳಬೇಕು ಎಂಬುದನ್ನೆಲ್ಲಾ ಆಲೋಚಿಸಬೇಕಾಗಿದೆ.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು.—ಇದು ಎಷ್ಟು ವರ್ಷದಿಂದ ಸರ್ಕಾರದವರ ಪರಿಶೀಲನೆಯಲ್ಲಿದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಫೈನಲೈಸ್ ಆಗಿ ಬಡ್ಜೆಟ್ ಟೈಮಿನಲ್ಲಿ ಸರ್ಕಾರದವರ ಕೈಗೆ ಬಂತು.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು.—ಇದನ್ನು ಹೋದ ಅಧಿವೇಶನದಲ್ಲೇ ಪರ್ಯಾಲೋಚಿಸುತ್ತೇವೆ ಎಂಬುದಾಗಿ ಸರ್ಕಾರದವರು ಹೇಳಿರಲಿಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೋದ ಅಧಿವೇಶನದಲ್ಲಿ ಹಣ ಸಾಕಾದಷ್ಟು ಇರಲಿಲ್ಲ. ಅದಕ್ಕೋಸ್ಕರವೇ ತೆಗೆದುಕೊಳ್ಳಲಿಲ್ಲ. ಈ ವರ್ಷ ಪರಿಶೀಲಿಸುತ್ತೇವೆ.

ಶ್ರೀ ಡಬ್ಲ್ಯು. ಎಚ್ ಹನುಮಂತಪ್ಪನವರು.—ಈ ವರ್ಷದ ಬಡ್ಜೆಟ್ಟಿನಲ್ಲಿ ಇದನ್ನು ಸೇರಿಸಲು ಸಾಧ್ಯವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬಡ್ಜೆಟ್ಟೆಲ್ಲಾ ತಮ್ಮ ಕೈಗೇ ಕೊಟ್ಟಿದೆ. ತಾವೇ ನೋಡಬಹುದು.

ಶ್ರೀ ಡಬ್ಲ್ಯು. ಹೆಚ್. ಹನುಮಂತಪ್ಪನವರು.—ಈಗ ಬೇಸಿಗೆ ಕಾಲವಾಗಿರುವುದರಿಂದ ಇದನ್ನು ಕೂಡಲೆ ಕೈಕೊಳ್ಳುವ ಅಗತ್ಯವಿದೆಯೆಂಬುದು ಸರ್ಕಾರದವರಿಗೆ ತಿಳಿದಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇದನ್ನು ಆದಷ್ಟು ಜಾಗ್ರತೆ ಮಾಡಬೇಕೆಂಬುದೇ ಸರ್ಕಾರದವರ ಉದ್ದೇಶ.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು.—ಮಿಲಿಟರಿ ಇಲಾಖೆಗೂ ಕೂಡ ಇದರಿಂದ ಸರ್ಕಾರದವರು ನೀರನ್ನು ಸರಬರಾಯಿ ಮಾಡುತ್ತಿದ್ದಾರೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮಾಡುತ್ತಿದ್ದಾರೆ.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು.—ಹೀಗೆ ನೀರಿನ ಸರಬರಾಯಿಗೆ ತೊಂದರೆಯಾದರೆ ಅವರಿಗೆ ಬಹಳ ಕಷ್ಟವಾಗುತ್ತದೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಟಿ ಮರಿಯಪ್ಪನವರು.—ಕಷ್ಟ ಅವರೊಬ್ಬರಿಗೇ ಅಲ್ಲ. ಬೆಂಗಳೂರು ವಿಸ್ತಾರವಾಗುತ್ತಿದೆ. ಇತರ ಅನೇಕ ಕೈಗಾರಿಕೆಗಳೂ ಪ್ರಾರಂಭವಾಗುತ್ತಿವೆ. ಆದ್ದರಿಂದ ಇದನ್ನು ಕೈಕೊಳ್ಳಬೇಕು ಎಂಬುದರಲ್ಲಿ ಸಂಶಯವಿಲ್ಲ. ಆದರೆ ಹೇಗೆ ದುಡ್ಡನ್ನು ಒದಗಿಸಬೇಕೆಂಬ ಮಹಾಸಮಸ್ಯೆ ಬಾಧಿಸುತ್ತಿದೆ.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು.—ಮುಂದಾದರೂ ಇಂಥಾ ಅನಾನುಕೂಲತೆ ಬರಬಹುದೆಂದು ಈ ಸ್ಕೀಮನ್ನು ತಯಾರಿಸಿದ್ದು ನಿಜವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಜನರಿಗಿರತಕ್ಕ ತೊಂದರೆ ಕಡಿಮೆಯಾಗಬೇಕು, ದಿನೇ ದಿನೇ ಹೆಚ್ಚುತ್ತಿರುವ demand ನ್ನು meet ಮಾಡಬೇಕೆಂದೇ ಈ ಎಸ್ಟಿಮೇಟನ್ನು ತಯಾರಿಸಿದ್ದು.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು.—ಹೀಗೆ ನೀರಿನ ಅನಾನುಕೂಲತೆಯಿಂದ ತಮ್ಮ ಸರ್ಕಾರಿ ಇಲಾಖೆಯವರಿಂದೇನಾದರೂ ನಿಮಗೆ ಒತ್ತಾಯ ಬಂದಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲಾಖೆಯವರಿಂದ ಒತ್ತಾಯ ಬರುವುದಿರಲಿ, ಸರ್ಕಾರದವರೇ ಇಲ್ಲಿನ ಮುಂದಿನ ನೀರಿನ ಅವಶ್ಯಕತೆಯನ್ನು ಪೂರೈಸಬೇಕೆಂದು ಯೋಚನೆ ಮಾಡುತ್ತಿದ್ದಾರೆ.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು.—ಯಾವಾಗ ಈ ಯೋಜನೆಯನ್ನು ಪೂರೈಸುತ್ತೀರಿ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸರ್ಕಾರದವರ ಆಲೋಚನೆಯಲ್ಲದೆಯೆಂದು ಆಗಲೇ ಉತ್ತರ ಕೊಟ್ಟಿದ್ದೇನೆ.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು.—ಎಷ್ಟು ದಿವಸದಲ್ಲಿ ಆಗುತ್ತದೆಂದು ಹೇಳುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಷ್ಟು ದಿವಸ ಎಂದು ಹೇಳುವುದಕ್ಕಾಗುವುದಿಲ್ಲ. ಅಂತೂ ತೀವ್ರವಾದ ಆಲೋಚನೆಯಲ್ಲಿದೆಯೆಂದು ಹೇಳಬಲ್ಲೆ.

Sri G. A. ACHARYA (Bangalore District–General).—Is it true that in several parts of the town pipes are leaky?

The Hon'ble Sri T. MARIAPPA.—Yes, I know. That is also one of the reasons and we are repairing them. That is with regard to certain localities only.

ಶ್ರೀ ಎಂ. ಗೋವಿಂದರೆಡ್ಡಿಯವರು (ಚಿತ್ರದುರ್ಗ ಜಿಲ್ಲೆ).—ಬೆಂಗಳೂರಿನಲ್ಲಿ ನೀರಿನ ಸರಬರಾಯಿ ಮಾಡುವವರು ಯಾರು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಪಬ್ಲಿಕ್ ವರ್ಕ್ಸ್ ಇಲಾಖೆಯವರು.

ಶ್ರೀ ಎಂ. ಗೋವಿಂದರೆಡ್ಡಿಯವರು.—ಹೀಗೆ ನೀರನ್ನು ಸರಬರಾಯಿ ಮಾಡುವುದು ಸರ್ಕಾರದವರ ಕರ್ತವ್ಯವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು.

ಶ್ರೀ ಎಂ. ಗೋವಿಂದರೆಡ್ಡಿಯವರು.—ಸರ್ಕಾರದವರು ಇದು ತಮ್ಮ ಕರ್ತವ್ಯವೆಂದು ಹೇಳಿ ಒದಗಿಸಿಕೊಡುವುದಕ್ಕೆ ಕಾರಣವೇನು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೀರಿನ ಸರಬರಾಯಿ ವಿಷಯವನ್ನು ಸರ್ಕಾರದವರು ವಹಿಸಿಕೊಳ್ಳದೆ ಇದ್ದರೆ ಇನ್ಯಾರು ವಹಿಸಿಕೊಳ್ಳುತ್ತಾರೆ?

ಶ್ರೀ ಎಂ. ಗೋವಿಂದರೆಡ್ಡಿಯವರು.—ಸಂಸ್ಥಾನದಲ್ಲಿರುವ ಎಲ್ಲಾ ಮುನಿಸಿಪಾಲಿಟಿಗಳವರೂ ತಮ್ಮನ್ನು ನೀರಿನ ಸರಬರಾಯಿ ವಿಷಯವನ್ನು ವಹಿಸಿಕೊಳ್ಳಬೇಕೆಂದು ಹೇಳಿದರೆ ವಹಿಸಿಕೊಳ್ಳುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸರ್ಕಾರದವರು ಮಿಕ್ಕ ಮುನಿಸಿಪಾಲಿಟಿಗಳಿಗೆ ಗ್ರಾಂಟ್ ಅಥವಾ ಸ್ಥಾಲಗಳನ್ನು ಒದಗಿಸಿಕೊಟ್ಟಿರುವುದು ಮಾನ್ಯ ಸದಸ್ಯರಿಗೇ ಗೊತ್ತು.

ಶ್ರೀ ಎಂ. ಗೋವಿಂದ ರೆಡ್ಡಿಯವರು.—ಇಲ್ಲಿಯೂ ಹಾಗೆಯೇ ಮಾಡುವುದಕ್ಕಾಗುವುದಿಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮುನಿಸಿಪಾಲಿಟಿಯವರು ನಮಗೆ ದುಡ್ಡು ಕೊಡುತ್ತಿದ್ದಾರೆ; ಹಾಗೆಯೇ ಮಾಡುವುದಿಲ್ಲ.

ಶ್ರೀ ಎಂ. ಗೋವಿಂದ ರೆಡ್ಡಿಯವರು.—ಬೇರೆ ಕಡೆಗಳಲ್ಲೂ ತಾವು ಮುನಿಸಿಪಾಲಿಟಿಯವರನ್ನು ಹಣ ಕೇಳಿದ್ದರೆ ಕೊಡುತ್ತಿರಲಿಲ್ಲವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಒಂದು ಸೊಡ್ಡ ಪ್ರದೇಶವಾಗಿದ್ದು, ಮುನಿಸಿಪಾಲಿಟಿಯವರು ಈ ಬಗ್ಗೆ ತಗುಲುವ ಖರ್ಚುಗಳನ್ನು ವಹಿಸಿಕೊಳ್ಳಲು ಒಪ್ಪಿದರೆ ಸರ್ಕಾರದವರು ಮಾಡುತ್ತಾರೆ, ಅಷ್ಟೆ.

ಶ್ರೀ ಎಂ. ಗೋವಿಂದ ರೆಡ್ಡಿಯವರು.—ಇನ್ನೂ ಯಾವುದಾದರೂ ಮುನಿಸಿಪಾಲಿಟಿಯವರು ಮುಂದೆ ಬಂದು ತಾವೂ ಹೀಗೆ ಹಣ ಕಂಟ್ರಿಬ್ಯೂಟ್ ಮಾಡುತ್ತೇವೆಂದು ಹೇಳಿದರೆ ತಾವು ವಹಿಸಿಕೊಳ್ಳುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಊಹೆಯ ವಿಷಯವಾಯಿತು.

ಶ್ರೀ ವಿ. ಎಸ್. ನಾರಾಯಣರಾಯರು (ಬೆಂಗಳೂರು ಸಿಟಿ ಮುನಿಸಿಪಾಲಿಟಿ).—ಬೆಂಗಳೂರು ಕಾರ್ಪೊರೇಷನ್ನಿನವರು ತಾವೇ ಈ ಕೆಲಸವನ್ನು ವಹಿಸಿಕೊಳ್ಳುತ್ತೆವೆಂದು ತಮ್ಮನ್ನು ಕೇಳಿಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್ ಬೇಕು.

Mr. SPEAKER.—Next question No. 166. Janab Mohamed Imam. The Hon'ble Member is not present. The question will be treated as unstarred.

Next question. No. 12. The Hon'ble Minister Sri R. Chennigaramiah is not here. What shall we do?

The Hon'ble Sri H. SIDDAIYA (Minister for Revenue and Excise).—He is not well Sir. He is coming late.

Sri G. A. ACHARYA (Bangalore District—General).—Other Ministers may answer, Sir. It is learnt that such a procedure is adopted in the Parliament.

Sri M. N. JOIS (Mysore District—General).—It is joint responsibility, they may go on. (laughter).

Sri H. K. VEERANNA GOWDA (Mandya District—General).—If the files are with the concerned Minister, how can some other Minister answer?

Mr. SPEAKER.—Question No. 119. Sri D. H. Chandrasekharaiya. The Hon'ble Member is not present. The question will be treated as unstarred.

Next Question. No. 170.—Janab Imam. The Hon'ble Member is not present. That question also will be treated as unstarred question.

Next question. No. 29. Sri S. Kariappa.—

Out-break of Cholera in soms Districts of the State.

*Q.—29. **Sri S. KARIAPPA** (Bangalore District—General).—

Will the Government be pleased to state:—

(*a*) the cause for the recent out-break of cholera in some of the districts in the State;

(*b*) the number of persons who succumbed to this epidemic (figures may be given talukwar)?